21) ಹಾವೇರಿ	2.50	0.07
1 2	3	4
22) ಕಾರವಾರ	4.30	1.04
23) ಗುಲ್ಬರ್ಗಾ	30.10	5.17
24) ರಾಯಚೂರು	12.50	6.08
25) ಕೊಪ್ಪಳ	3.68	4.16
26) ಬಳ್ಳಾರಿ	20.00	8.34
27) ಬೀದರ್	34.50	22.83
ಒಟ್ಟು	**727.65**	**209.68**

ಪೆಬ್ರನ್ ರೋಗ ನಿವಾರಣೆಯಲ್ಲಿ ನಡೆದ ಅವ್ಯವಹಾರ

1054 (1241) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ. ರೇಷ್ಮೆ ಇಲಾಖೆಯಲ್ಲಿ ಬಿತ್ತನೆ ರೇಷ್ಮೆ ಗೂಡುವಲಯದಲ್ಲಿ ಪೆಬ್ರನ್ ರೋಗನಿವಾರಣೆಗಾಗಿ ಸರ್ಕಾರವು ಮಂಜೂರುಮಾಡಿದ ಮೊತ್ತಕ್ಕಿಂತ ಒಂದು ಕೋಟಿರೂಪಾಯಿ ಹೆಚ್ಚುವರಿಯಾಗಿ ಖರ್ಚುಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಹೆಚ್ಚುವರಿಯಾಗಿ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಸರ್ಕಾರ ಅನುಮತಿ ನೀಡಿದೆಯೇ ಅಥವಾ ಆಯವ್ಯಯದಲ್ಲೂ ಹಂಚಿಕೆಯಾದ ನಂತರ ಸರ್ಕಾರ ಹಂಚಿಕೆ ಮಾಡಲಾಗಿದೆಯೇ? ಈ ರೀತಿ ಖರ್ಚು ಮಾಡಿದ್ದಾಗ್ಯೂ ಸದರಿ ರೋಗದ ನಿಯಂತ್ರಣದಲ್ಲಿ ಇಲಾಖೆಯು ಸಂಪೂರ್ಣವಾಗಿ ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ. ಹಾಗಿದ್ದಲ್ಲಿ ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಸರ್ಕಾರದ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು)

ಅ. ಇಲ್ಲ.

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.